ಕ್ರಮ ತೆಗೆದುಕೊಂಡು ಒಂದು ಸಮಿತಿಯನ್ನು ಮಾಡಿದ್ದೇವೆ, ಆದರಿಂದ ಒಂದು ವರದಿ ಇಷ್ಟರಲ್ಲೇ ಬರಲಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅದರಲ್ಲಿ ಏನಾದರೂ ನ್ಯೂನತೆಗಳು ಗಮನಕ್ಕೆ ಬಂದರೆ ಅದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇನೆ.

(೩) ಸಂಕೇಶ್ವರ ನಗರದ ಕೆ. ಎಸ್. ಆರ್. ಟಿ. ಸಿ. ಬಸ್ ನಿಲ್ದಾಣವನ್ನು ಸಂಸಜ್ಜಿತಗೊಳಿಸುವುದು.

ಶ್ರೀ ಮಲ್ಲಿಕಾರ್ಜುನಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸಂಕೇಶ್ವರ ನಗರದಲ್ಲಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಸ್ಟ್ಯಾಂಡ್ ಜನರಿಗೆ ಆದ್ಯತ ಸ್ಟ್ಯಾಂಡ್ ಎಂದು ಜನರಿಗೆ ಭಾವನೆಯಾಗಿದೆ, ಬಸ್ ಸ್ಟ್ಯಾಂಡ್ ಆವರಣದಲ್ಲಿರುವ ರಸ್ತೆ ಇದೆಯೋ ಅಥವಾ ತಗ್ಗು ಇದೆಯೋ ಅರ್ಥ ಮಾಡಿಕೊಳ್ಳುವುದೇ ಕಠಿಣವಾಗಿದೆ. ರಸ್ತೆಯಲ್ಲಿ ತಗ್ಗು ಅಥವಾ ತಗ್ಗಿನಲ್ಲಿ ರಸ್ತೆ. ಬಸ್‌ನಲ್ಲಿ ಬಸ್ ಸ್ಟ್ಯಾಂಡೋ ಅಥವಾ ಬಸ್ ಸ್ಟ್ಯಾಂಡ್‌ನಲ್ಲಿ ಬಸ್ಸೋ ಎಂಬ ಪ್ರಶ್ನೆಗೆ ಉತ್ತರ ಸಿಗದು.

ಮೂತ್ರಾಲಯಕ್ಕೆ ಹೋಗಬೇಕಾದರೆ ಮೂಗನ್ನು ತೆಗೆದಿಟ್ಟು ಹೋಗಬೇಕು ಹಾಗೂ ಬೇರೆ ರಾಜ್ಯದಿಂದ ಈ ಬಸ್ ಸ್ಟ್ಯಾಂಡಿಗೆ ಬರುವ ಪ್ರವಾಸಿಗರಿಂದ ಸರ್ಟಿಫಿಕೇಟ್ ಕೊಟ್ಟು ಈ ಬಸ್ ಸ್ಟ್ಯಾಂಡನ್ನು ರಾಜ್ಯದಲ್ಲಿ ಪ್ರಥಮದರ್ಜೆ ಬಸ್ ಸ್ಟ್ಯಾಂಡ್ ಎಂದು ಪ್ರಕಟಿಸಿ ಕೊಡಬೇಕಾಗಿತ್ತದೆ. ಈ ಬಸ್ ಸ್ಟ್ಯಾಂಡ್ ಸುತ್ತ ಮುತ್ತಲೂ ಹೇಳತೀರದಷ್ಟು ಗಲೀಜು ವಾತವರಣವಿದ್ದು, ಬಸ್ ಸ್ಟ್ಯಾಂಡು ಅಥವಾ ಕೊಳಚೇ ಪ್ರದೇಶವೋ ಎಂಬುದನ್ನು ನಿರ್ಣಯಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಒಂದಾನೊಂದು ಕಾಲದಲ್ಲಿ ಸಂಕೇಶ್ವರ ಬಸ್ ಸ್ಟ್ಯಾಂಡು ಎಲ್ಲಾ ರೀತಿಯಲ್ಲಿ ಕೂಡ ಪ್ರಶಸ್ತಿ ಪಡೆಯುತ್ತಿದ್ದ ಬಸ್ ಸ್ಟ್ಯಾಂಡ್ ಆಗಿತ್ತು. ಬಸ್ ಸ್ಟ್ಯಾಂಡ್ ಸಂಧಾರಣೆಗಾಗಿ ಕಳೆದ ಹತ್ತು ವರ್ಷಗಳಲ್ಲಿ ಮಂಜೂರಾಗಿರುವ ಹಣದ ವಿವರ ಹಾಗೂ ಹಣ ಖರ್ಚು ಮಾಡದೆ ಇರುವುದಕ್ಕೆ ಕಾರಣ ಕರ್ನಾಟಕ ಮಹಾರಾಷ್ಟ್ರದ ಗಡಿಯಲ್ಲಿರುವ ಈ ಬಸ್ ಸ್ಟ್ಯಾಂಡನ್ನು ಸರ್ವ ರೀತಿಯಲ್ಲಿ ಸುಸಜ್ಜಿತ ಮಾಡಲು ಸರಕಾರವನ್ನು ಕೇಳಿಕೊಂಡರೂ ಕೂಡ ಸರಕಾರದಿಂದ ಯಾವುದೇ ಉತ್ತರವಿಲ್ಲ. ಈಗಿರುವ ಕಟ್ಟಡವನ್ನು ಸಂಪೂರ್ಣವಾಗಿ ಕೈಬಿಟ್ಟು ಹೊಸ ಮಾದರಿಯ ಬಸ್ ಸ್ಟ್ಯಾಂಡನ್ನು ಕಟ್ಟಿಸುವುದಕ್ಕಾಗಿ ಜನರು ಕಾತುರರಾಗಿರುತ್ತಾರೆ. ಮಾನ್ಯ ಸಾರಿಗೆ ಮಂತ್ರಿಗಳು ಕೂಡಲೇ ವಿಮಾನದಿಂದ ಹೋಗಿ ಈ ಬಸ್ ಸ್ಟ್ಯಾಂಡನ್ನು ಪ್ರವಾಸಿಗರಂತೆ ಹೋಗಿ ಬರಬೇಕಾಗಿ ಒತ್ತಾಯಿಸುತ್ತೇನೆ. ಹಾಗೂ ಇದರ ಬಗ್ಗೆ ವಿಧಾನಸಭೆಯಲ್ಲಿ ಸೂಕ್ತ ಉತ್ತರ ಬಯಸುತ್ತೇನೆ.

೧೧–೩೦ ಎ.ಎಂ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸಂಕೇಶ್ವರದಲ್ಲಿ ರಾಜ್ಯರಸ್ತೆ ಸಾರಿಗೆ ನಿಗಮದ ಬಸ್ ನಿಲ್ದಾಣದ ಆವರಣದಲ್ಲಿ ಅಲ್ಲಲ್ಲಿ ತಗ್ಗು ಬಾಂಟಾಗಿರುವುದು ಸಾರಿಗೆ ನಿಗಮದ ಗಮನಕ್ಕೆ ಬಂದಿದೆ. ಆದ್ದರಿಂದ ೧೯೮೭–೮೮ನೇ ಸಾಲಿನಲ್ಲಿ ಆವರಣಕ್ಕೆ ಸಂಮಾರು ೪ ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಡಾಂಬರು ಹಾಕಲು ಯೋಚಿಸಲಾಗಿದೆ. ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಟೆಂಡರ್‌ಗಳನ್ನು ಕರೆದು ಕಾರ್ಯವನ್ನು ಕೈಗೊಳ್ಳಲಾಗುವುದು.

ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಮುಖ್ಯ ಪಟ್ಟಣಗಳಲ್ಲಿರುವ ಸಾರಿಗೆ ನಿಗಮದ ಬಸ್ ನಿಲ್ದಾಣಗಳ ಶೌಚಾಲಯಂಗಳನ್ನು ನವೀಕರಿಸುವ ಯೋಜನೆಯನ್ನು ಹಾಕಿಕೊಂಡಿದ್ದು, ಸಾರಿಗೆ ನಿಗಮದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಅವುಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಅದರಂತೆ ಸಂಕೇಶ್ವರ ಬಸ್ ನಿಲ್ದಾಣದಲ್ಲೂ ಶೌಚಾಲಯವನ್ನು ನವೀಕರಿಸಲು ಕ್ರಮ ಕೈಗೊಳ್ಳಲಾಗುವುದು.

ಸಾಮಾನ್ಯವಾಗಿ ಅವಶ್ಯಕತೆಗೆ ಅನುಗುಣವಾಗಿ ಬಸ್ ನಿಲ್ದಾಣದ ಕಟ್ಟಡಕ್ಕೆ ದುರಸ್ತಿ ಕಾರ್ಯವನ್ನು ಹಾಗೂ ಆವರಣ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು. ಸಂಕೇಶ್ವರ ಬಸ್ ನಿಲ್ದಾಣಕ್ಕೆ ಇದುವರೆವಿಗೂ ಎಂದರೆ ಹತ್ತು ವರ್ಷಗಳಲ್ಲಿ ಸಣ್ಣಪುಟ್ಟ ಕೆಲಸಗಳಿಗೆ ೮೮೦೦೦ ರೂಪಾಯಿಗಳನ್ನು ದುರಸ್ತಿ ಕಾರ್ಯಗಳಿಗೆ ಸುಮಾರು ೧೪೦೦೦ ರೂಪಾಯಿಗಳನ್ನು ಹಾಗೂ ಖಾಯಂ. ಕೆಲಸಗಳಿಗೆ

೧೯೦೦೦ ರೂಪಾಯಿಗಳನ್ನು ಮೆಚ್ಚ ಮಾಡಲಾಗಿದೆ. ರಾಜ್ಯದಲ್ಲಿ ಎಲ್ಲಿ ಸಾಂಗೆ ನಿಗಮದ ಬಸ್ ನಿಲ್ದಾಣ ಇಲ್ಲವೋ ಅಂತಹ ಸ್ಥಳಗಳಲ್ಲಿ ಬಸ್ ನಿಲ್ದಾಣ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಆದ್ಯತೆ ನೀಡ ಲಾಗುವುದು. ಆದ್ದರಿಂದ ಸಂಕೇಶ್ವರದಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಿಸಲು ಸಧ್ಯಕ್ಕೆ ಯೋಚಿಸಿರುವುದಿಲ್ಲ.

ಹೊಸದುರ್ಗ ತಾಲ್ಲೂಕಿನ ಶ್ರೀರಾಮಪುರದಲ್ಲಿರುವ ಸಿದ್ದಾರ್ಥ ವಿದ್ಯಾ ಸಂಸ್ಥೆಯಂ ಕಾರ್ಯದರ್ಶಿ ಸುಳ್ಳು ಸರ್ಟಿಫಿಕೇಟ್ ಕೊಟ್ಟಿರುವುದು.

ಶ್ರೀ ಆರ್. ರಾಮಯ್ಯ,—ಮಾನ್ಯ ಅಧ್ಯಕ್ಷರೇ, ಹೊಸದುರ್ಗ ತಾ. ಶ್ರೀರಾಮಪುರದಲ್ಲಿನ ಶ್ರೀ ಸಿದ್ಧಾರ್ಥ ವಿದ್ಯಾಸಂಸ್ಥೆಯ ಕಾರ್ಯದರ್ಶಿಯಾದ ಟಿ. ಸಿದ್ದಯ್ಯನು ಹುಟ್ಟಿನಿಂದ ಬುಡುಬುಡಿಕೆ ಜಾತಿಗೆ ಸೇರಿದವನಾಗಿದ್ದು ಅವನ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸೇರುವಾಗಲೂ ಬುಡುಬುಡಿಕೆ ಜಾತಿಯವ ನಾಗಿಯೇ ಸೇರಿ ನಂತರ ಮೇಲಿನವಿದ್ಯಾಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಲು ಶಿಳ್ಳಿಕ್ಯಾತ ಜಾತಿಯಂ ಸುಳ್ಳು ಸರ್ಟಿಫಿಕೇಟನ್ನು ಪತ್ರ ನಂ.ಜಿ.ವಿ. ೯೭೮-ನಾಡಜಾತಿ ಸಿ.ಐ.ಡಿ. ೮೭ ದಿನಾಂಕ ೨೬-೧೧-೮೭ ರಂದು ಪಡೆದಿರುತ್ತಾನೆ.

ಸರ್ಕಾರದ ಆದೇಶದಂತೆ ಬುಡಬುಡಿಕೆ ಜಾತಿಯು ಹಿಂದುಳಿದ ವರ್ಗದ 'ಎ'ಗುಂಪಿಗೆ ಸೇರಿದ್ದಾಗಿದೆ ಆದರೆ ಶ್ರೀ ಸಿದ್ಧಾರ್ಥ ವಿದ್ಯಾಸಂಸ್ಥೆಯು ಪರಿಶಿಷ್ಟ ಜಾತಿ/ವರ್ಗದ ವಿದ್ಯಾಸಂಸ್ಥೆಯಾದ್ದರಿಂದ, ಅಲ್ಲಿ ತಾನು ಕಾರ್ಯದರ್ಶಿಯಾಗಲು ಅಪೇಕ್ಷಿಸಿ ಪರಿಶಿಷ್ಟ ಜಾತಿಯ ಅಡಿಯಲ್ಲಿ ಬರುವ ಶಿಳ್ಳಿಕ್ಯಾತ ಎಂಬ ಸುಳ್ಳು ಜಾತಿ ಸರ್ಟಿಫಿಕೇಟನ್ನು ತಹಶೀಲ್ದಾರರಿಂದ ಪಡೆದಿದ್ದು, ಈ ಸಂಸ್ಥೆಯಲ್ಲಿ ಮುಂದುವರಿಯುತ್ತಿ ದ್ದಾನೆ.

ಜೊತೆಗೆ ಈ ಸುಳ್ಳು ಸರ್ಟಿಫಿಕೇಟನ್ನು ಪಡೆದಿರುವ ವ್ಯಕ್ತಿ ತನ್ನ ವಂಗಳನ್ನು ಶಾಲೆಗೆ ಸೇರಿಸು ವಾಗಲೂ ಬುಡಬುಡಿಕೆ ಜಾತಿಗೆ ಸೇರಿದವಳೆಂದು ಹೇಳಿ ಸೇರಿಸಿದ್ದಾನೆ.

ಈ ವ್ಯಕ್ತಿ ಈ ಸುಳ್ಳು ಜಾತಿ ಸರ್ಟಿಫಿಕೇಟ್‌ನಿಂದ ಅನೇಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಸರ್ಕಾರಕ್ಕೆ ವಂಚಿಸಿರುತ್ತಾನೆ. ಜೊತೆಗೆ ಪರಿಶಿಷ್ಟ ಜಾತಿಗೆ ಸೇರಿದವನಾಗಿ ಅನೇಕ ಸರ್ಕಾರದ ವಂತ್ತು ಮಂಡಲ ಪಂಚಾಯ್ತಿ ಚುನಾವಣೆಯಲ್ಲಿಯೂ ಸ್ಪರ್ಧಿಸಿದ್ದಾನೆ. ಆದ್ದುದರಿಂದ ಸರ್ಕಾರ ಸುಳ್ಳು ಜಾತಿ ಸರ್ಟಿಫಿಕೇಟ್‌ನ್ನು ನೀಡಿದ ಅಧಿಕಾರಿ ಮತ್ತು ಪಡೆದ ವ್ಯಕ್ತಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿ ಕ್ರಮ ಜರುಗಿಸಲು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಂದ ವರದಿ ತರಿಸಿ ಸನ್ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

ರೋಣ ಹಾಗೂ ಯಲ್ಬುರ್ಗ ತಾಲ್ಲೂಕುಗಳಲ್ಲಿ ಸ್ವಾತಂತ್ರ್ಯ ಯೋಧರ ಸುಳ್ಳು ಸರ್ಟಿಫಿ ಕೇಟ್ ಕೊಟ್ಟು ವಿಶ್ರಾಂತಿ ವೇತನ ಪಡೆಯುತ್ತಿರುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೇ, ಸ್ವಾತಂತ್ರ್ಯ ಚಳುವಳಿಯಲ್ಲಿ ದೇಶ ಕ್ಕಾಗಿ ಹೋರಾಡಿದ ಸ್ವಾತಂತ್ರ್ಯ ಯೋಧರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಶ್ರಾಂತಿ ವೇತನ ವನ್ನು ಕೊಡುತ್ತಿರುವ ವಿಷಯು ತಮಗೆ ತಿಳಿದಿರುವುದೆಂದು ನಾನು ಭಾವಿಸುತ್ತೇನೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸದ ಅನೇಕರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರ ದಿಂದ ವಿಶ್ರಾಂತಿ ವೇತನವನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇಂತಹ ಅನೇಕ ಬೋಗಸ್ ಸ್ವಾತಂತ್ರ್ಯ ಯೋಧರನ್ನು ಪತ್ತೆ ಹಚ್ಚಿ ಅಂತಹವರ ವಿಶ್ರಾಂತಿವೇತನ ನಿಲ್ಲಿಸುವ ನಿಟ್ಟಿನಲ್ಲಿ ಕ್ರಮಗಳು ಜರುಗುತ್ತಿವೆ. ಆದರೆ ಇತ್ತೀಚಿನ ಅತ್ಯಂತ ಕಳವಳಕಾರಿ ಬೆಳವಣಿಗೆ ಎಂದರೆ ಹೈದರಾಬಾದ್‌ನ ವಿಮೋಚನಾ ಅಂದರೆ ರಜಾಕರವಿರೋಧಿ ಚಳುವಳಿಯ ಕಾಲದಲ್ಲಿ ಹೋರಾಡಿದವರಿಗೂ ಮಾಸಿಕ ವಿಶ್ರಾಂತಿವೇತನವನ್ನು ಕೊಡುವ ಕ್ರಮವನ್ನು ಸರ್ಕಾರ ಜಾರಿಯಲ್ಲಿ ತಂದಿದೆ.